# ಅಫ್ರಿದಿ ಪುಸ್ತಕದ ಫಜೀತಿ




‘ಗೇಮ್ ಚೇಂಜರ್’ ಎನ್ನುವುದು ಪಾಕಿಸ್ತಾನದ ಸ್ಟಾರ್ ಕ್ರಿಕೆಟರ್ ಶಾಹಿದ್ ಅಫ್ರಿದಿಯ ಹೊಸ ಪುಸ್ತಕದ ಹೆಸರು. ಸಾಮಾನ್ಯವಾಗಿ ಸಿನಿಮಾ/ ಕ್ರಿಕೆಟ್ ತಾರೆಯರು ಖುದ್ದಾಗಿ ಪುಸ್ತಕ ಬರೆಯುವುದಿಲ್ಲ. ಇವರು ಹೇಳುತ್ತಾ ಹೋಗುತ್ತಾರೆ, ಲೇಖಕನೊಬ್ಬ ಬರೆದುಕೊಡುತ್ತಾನೆ. ಮಾಹಿತಿಯನ್ನು ಕಲೆ ಹಾಕುವುದು ಲೇಖಕನ ಕೆಲಸವಾದರೂ, ತಾಳೆ ಹಾಕುವುದು ಇಬ್ಬರ ಜವಾಬ್ದಾರಿ. ಹೊಸ ಪುಸ್ತಕದಲ್ಲಿ ಈ ಇಬ್ಬರೂ ಜವಾಬ್ದಾರಿಯನ್ನು ಸರಿಯಾಗಿ ನಿರ್ವಹಿಸಿಲ್ಲ ಎನ್ನುವುದು ಇದೀಗ ಬಹಿರಂಗವಾಗಿದೆ. ಶಾಹಿದ್ ಅಫ್ರಿದಿಯ ನೆನಪುಗಳ ಈ ಪುಸ್ತಕವನ್ನು ಜೊತೆ ಸೇರಿ ಬರೆದ ವಜಾಹತ್ ಎಸ್. ಖಾನ್, ಪಾಕಿಸ್ತಾನದ ಹಿರಿಯ ಪತ್ರಕರ್ತ. ವೈಸ್ ನ್ಯೂಸ್, ದಿ ಟೈಮ್ಸ್ ಮತ್ತು ಇಂಡಿಯಾ ಟುಡೇಗೆ ವರದಿಗಾರನಾಗಿದ್ದವ. ಪಾಕಿಸ್ತಾನದ ಮಾಧ್ಯಮರಂಗದಲ್ಲಿ ಹಲವು ಹೊಸತುಗಳನ್ನು ಸಾಧಿಸಿದ ವಜಾಹತ್, ಶಾಲಾ ದಿನಗಳಲ್ಲಿ ಕ್ರಿಕೆಟ್ ಬೌಲರ್ ಆಗಿದ್ದ. ಹಾಗಾಗಿ ಇಬ್ಬರೂ ಸೇರಿ ಬರೆದ ಪುಸ್ತಕದಲ್ಲಿ ತಪ್ಪುಗಳು ಇರಬಾರದಿತ್ತು. ಆದರೆ ಹೇರಳ ತಪ್ಪುಗಳು, ಸಾಕಷ್ಟು ವಿವಾದಾತ್ಮಕ ಏಕಪಕ್ಷೀಯ ಅಭಿಪ್ರಾಯಗಳೂ ಸೇರಿವೆ ಎನ್ನುವುದು ಈಗ ಚರ್ಚೆಯ ವಿಷಯ.

ಅಫ್ರಿದಿ ಎಂದಾಗ ನೆನಪಿಗೆ ಬರುವುದು, 1996ರಲ್ಲಿ ಏಕದಿನ ಪಂದ್ಯದಲ್ಲಿ ಆತ ಸಿಡಿಸಿದ ಜಗತ್ತಿನ ಅತ್ಯಂತ ವೇಗದ ಶತಕ. 37 ಎಸೆತಗಳಲ್ಲಿ ಆತ ಸಿಡಿಸಿದ ಆ ವೇಗದ ಶತಕ 18 ವರ್ಷಗಳ ಕಾಲ ವಿಶ್ವದಾಖಲೆಯಾಗಿತ್ತು. (2014ರಲ್ಲಿ ನ್ಯೂಜಿಲೆಂಡಿನ ಕೋರಿ ಆ್ಯಂಡರ್ಸನ್ 36 ಎಸೆತಗಳಲ್ಲಿ ಮತ್ತು 2015ರಲ್ಲಿ ದಕ್ಷಿಣ ಆಫ್ರಿಕಾದ ಎಬಿ ಡಿವಿಲಿಯರ್ಸ್ 31 ಎಸೆತಗಳಲ್ಲಿ ಶತಕ ಸಿಡಿಸಿ ಆ ವಿಶ್ವದಾಖಲೆ ಮುರಿದಿದ್ದಾರೆ.) ಅಫ್ರಿದಿ ಆ ವೇಗದ ಶತಕದ ದಾಖಲೆ ಮಾಡಿದಾಗ ವಯಸ್ಸು 16 ವರ್ಷ ಎಂದೇ ಕಳೆದ 20 ವರ್ಷಗಳಿಂದ ಎಲ್ಲರೂ ನಂಬಿದ್ದಾರೆ. ಅಫ್ರಿದಿಯೂ ಇದನ್ನು ಅಲ್ಲಗಳೆದಿರಲಿಲ್ಲ. ಈಗ ಹೊಸ ಪುಸ್ತಕದಲ್ಲಿ ‘ಅಫ್ರಿದಿಯ ಜನನ 1975ರಲ್ಲಿ ಆಗಿದ್ದು; ಎಲ್ಲರೂ ತಿಳಿದುಕೊಂಡಂತೆ 1980ರಲ್ಲಿ ಅಲ್ಲ’ ಎಂದು ನಮೂದಿಸಲಾಗಿದೆ. ಅಂದರೆ ವಿಶ್ವದಾಖಲೆಯ ವೇಗದ ಶತಕ ಹೊಡೆದಾಗ, ಆತನ ವಯಸ್ಸು 19 ಆಗಿತ್ತು. ತಮಾಷೆಯ ಸಂಗತಿಯೆಂದರೆ, ಈಗ ಈ ಪುಸ್ತಕದ ಇಂತಹ ಹಲವು ವಿವರಗಳು, ಕಾಮೆಂಟ್‌ಗಳು ವಿವಾದದ ಸ್ವರೂಪ ಪಡೆದುಕೊಂಡ ಬಳಿಕ ಅಫ್ರಿದಿ ‘ಪುಸ್ತಕದಲ್ಲಿ ಬರೆದದ್ದೂ ತಪ್ಪು. ನಾನು ಹುಟ್ಟಿದ್ದು 1977ರಲ್ಲಿ, ಪುಸ್ತಕದಲ್ಲಿ ಬರೆದಂತೆ 1975ರಲ್ಲಿ ಅಲ್ಲ’ ಎಂಬ ಸ್ಪಷ್ಟನೆ ನೀಡಿದ್ದಾನೆ!

ಹುಟ್ಟಿದ ವರ್ಷದ ಗೊಂದಲಕ್ಕೆ ಅಫ್ರಿದಿಯ ಕಾರಣಗಳೂ ತಮಾಷೆಯಾಗಿವೆ. ‘14 ವರ್ಷದೊಳಗಿನ ಕ್ರಿಕೆಟ್ ತಂಡಕ್ಕೆ ಆಯ್ಕೆಯಾದಾಗ ನನ್ನ ವಯಸ್ಸನ್ನು ಕೇಳಿದ್ದರು. ತಂಡದ ಕೆಲವರ ಸಲಹೆಯಂತೆ ನಾನು ಹುಟ್ಟಿದ ನಿಜ ವರ್ಷ ತಿಳಿಸಲಿಲ್ಲ. ನಮ್ಮೂರಲ್ಲಿ ಆಗೆಲ್ಲ ಹುಟ್ಟಿದ ದಿನಾಂಕ ನಮೂದಿಸುವ ಪದ್ಧತಿ ಇರಲಿಲ್ಲ, ಗೊಂದಲ ಸಹಜ’ ಎಂದಿದ್ದಾನೆ ಅಫ್ರಿದಿ. ಪುಸ್ತಕ ಬಿಡುಗಡೆಯ ದಿನ ‘ಪುಸ್ತಕವನ್ನು ನಾನಿನ್ನೂ ಓದಿಲ್ಲ. 7–8 ತಿಂಗಳಿಂದ ಬ್ಯುಸಿಯಾಗಿದ್ದೇನೆ. ಹಾಗಾಗಿ ವಿವರಗಳನ್ನು ಡಬಲ್‌ಚೆಕ್ ಮಾಡಲು ಆಗಿಲ್ಲ. ಎರಡನೆ ಮುದ್ರಣಕ್ಕೆ ತಪ್ಪುಗಳನ್ನು ಸರಿ ಮಾಡುತ್ತೇವೆ’ ಎಂದಿದ್ದಾನೆ.

ಪುಸ್ತಕದಲ್ಲಿ ಸಹ ಆಟಗಾರರ ಬಗ್ಗೆ ಅಫ್ರಿದಿಯ ಕಾಮೆಂಟುಗಳೂ ವಿವಾದ ಸೃಷ್ಟಿಸುತ್ತಿವೆ. ಗೌತಮ್ ಗಂಭೀರ್ ಕುರಿತು ‘ಈತ ಡಾನ್ ಬ್ರಾಡ್ಮನ್ ಮತ್ತು ಜೇಮ್ಸ್ ಬಾಂಡ್‌ನ ಮಿಶ್ರತಳಿಯಂತೆ ವರ್ತಿಸುತ್ತಾನೆ. ನಮ್ಮಲ್ಲಿ ಆತನನ್ನು ಸುಟ್ಕೊಂಡವ ಅಂತ ಕರೀತೀವಿ. ಮೈದಾನದಲ್ಲಿ ನೀವು ಆಕ್ರಮಣಕಾರಿ, ಸ್ಪರ್ಧಾತ್ಮಕ ಆಗಿರಿ, ಆದರೆ ಪಾಸಿಟಿವ್ ಆಗಿರಬೇಕು. ಗಂಭೀರ್ ಪಾಸಿಟಿವ್ ಅಲ್ಲ’ ಎನ್ನುವುದು ಅಫ್ರಿದಿ ಟೀಕೆ. ಸಿಟ್ಟಿಗೆದ್ದ ಗಂಭೀರ್, ‘ಅಫ್ರಿದಿ ಮನೋಚಿಕಿತ್ಸಕರನ್ನು ಭೇಟಿಯಾಗಲಿ. ಭಾರತಕ್ಕೆ ಬಂದರೆ ನಾನೇ ವ್ಯವಸ್ಥೆ ಮಾಡುತ್ತೇನೆ’ ಎಂದಿದ್ದಾನೆ. ‘ಗಂಭೀರ್ ವಿರುದ್ಧ ವೈಯಕ್ತಿಕ ವೈಷಮ್ಯವಿಲ್ಲ. ಮೈದಾನದಲ್ಲಿ ಅವತ್ತು ನಡೆದ ವಾಗ್ವಾದಕ್ಕೆ ಇಬ್ಬರೂ ಹೊಣೆ ಎನ್ನುವುದು ನನ್ನ ಮಾತಿನ ಇಂಗಿತ’ ಎಂದಿದ್ದಾನೆ ಅಫ್ರಿದಿ. 2007ರಲ್ಲಿ ನಡೆದ ಪಂದ್ಯವೊಂದರಲ್ಲಿ ಇಬ್ಬರ ಮಧ್ಯೆ ನಡೆದ ವಾಗ್ವಾದ ಬಹಳ ವರ್ಷಗಳಿಂದ ಮುಂದುವರಿದಿದ್ದು, ಈಗ ಪುಸ್ತಕದಲ್ಲೂ ನಮೂದಾಗಿದೆ. ವಾಖರ್ ಯೂನಿಸ್ ಜೊತೆಗಿನ ತಿಕ್ಕಾಟ, ಮಿಯಾಂದಾದ್‌ನ ‘ದಾದಾಗಿರಿ’ ಕುರಿತೂ ಪುಸ್ತಕದಲ್ಲಿ ಕಾಮೆಂಟುಗಳಿವೆ. ಮಿಯಾಂದಾದ್ ಅದನ್ನು ಕೇಳಿ ಜೋರಾಗಿ ನಕ್ಕುಬಿಟ್ಟಿದ್ದಾನಂತೆ. ಇನ್ನೊಬ್ಬ ಪಾಕ್ ಆಟಗಾರ ಇಮ್ರಾನ್ ಫರ್ಹಾತ್, ‘ಪಾಕ್ ತಂಡಕ್ಕೆ ಸೇರ್ಪಡೆಯಾದಾಗ ತನ್ನ ವಯಸ್ಸು 16 ಎಂದು ಕಳೆದ 20 ವರ್ಷಗಳಿಂದ ಸುಳ್ಳು ಹೇಳಿಕೊಂಡು ಓಡಾಡುತ್ತಿದ್ದ ಅಫ್ರಿದಿ ಈಗ ತನ್ನನ್ನು ಸ್ವಚ್ಛ ಮಾಡಿಕೊಳ್ಳಲು ಹೊರಟಿದ್ದಾನೆ. ಮಾತ್ರವಲ್ಲ, ಪಾಕಿಸ್ತಾನದ ಇತರ ದಂತಕಥೆಯಂತಿರುವ ಹಿರಿಯ ಆಟಗಾರರ ವಿರುದ್ಧ ಟೀಕಿಸಿದ್ದಾನೆ’ ಎಂದು ಫರ್ಹಾತ್ ಕಿಡಿಕಾರಿದ್ದಾನೆ.

ವಿವಾದಗಳ ಹೊರತಾಗಿಯೂ ಕುತೂಹಲಕರ ವಿವರಗಳು ಪುಸ್ತಕದಲ್ಲಿವೆ. ಪಾಕಿಸ್ತಾನದ ವಾಯುವ್ಯ ಗುಡ್ಡಗಾಡುಗಳ ಅರಾಜಕ ಊರಿನಿಂದ ಕರಾಚಿಯ ಶಿಷ್ಟ ಪರಿಸರಕ್ಕೆ ಬಂದದ್ದು, ಅಲ್ಲಿಂದ ದಕ್ಷಿಣ ಇಂಗ್ಲೆಂಡಿನ ಕೌಂಟಿ ಪಾರ್ಕ್‌ಗಳಲ್ಲಿ ಬೆಳೆದದ್ದು, ಅನೂಹ್ಯ ಲೆಗ್‌ಬ್ರೇಕ್ ಮತ್ತು ಭುಜಬಲದ ಸಿಕ್ಸರ್‌ಗಳ ಮೂಲಕ ಪ್ರೇಕ್ಷಕರನ್ನು ರಂಜಿಸಿದ್ದು, ಭಾರತದ ನೆಲದಲ್ಲಿ ಸಿಕ್ಕಿದ ಜನಪ್ರೀತಿ, ಕೆಲವೆಡೆ ಪ್ರೇಕ್ಷಕರ ಕಿರಿಕಿರಿ, ಪಾಕ್ ಆಟಗಾರರ ಭ್ರಷ್ಟಾಚಾರದ ವಿರುದ್ಧ ಹೋರಾಡಿದ್ದು– ಹೀಗೆ ಪುಸ್ತಕದಲ್ಲಿ ಹಲವು ಸಂಗತಿಗಳಿವೆ. ಆದರೆ ಈ ಸಂಗತಿಗಳ ಬಗ್ಗೆಯೂ, ಪ್ರತಿಟೀಕೆಗಳು ಬಂದರೆ ಅಫ್ರಿದಿ ಇನ್ನೆಷ್ಟು ಸ್ಪಷ್ಟೀಕರಣಗಳನ್ನು ಕೊಡಬೇಕಾಗಿ ಬರುತ್ತೋ!

■ ಹನಿ

Printed and Published by B.A. Ravi on behalf of The Printers (Mysore) Private Ltd. Printed at M/s Rajhan's Enterprises, No.134, 4th Main Road, Industrial Town, Rajajinagar, Bangalore - 560044 and published from The Printers (Mysore) Private Ltd., Plot Nos. 7 to12, Kumbalgodu Industrial Area, II Phase, Bengaluru - 560074. Editor: K.N. TILAK KUMAR.
Editorial Office: 75, M.G Road, Bengaluru-560 001 E-mail:editorsu@sudha.co.in. Phone: 2588 0000, Fax: 25880618, Editorial:25880619, Circ:1800-425-8009, Advt: 1800-425-8008, ©All rights reserved. Reproduction in whole or in part without permission is prohibited.
RNI No 7891/65